# ಬೆಳೆ ವಿಮೆ ಯೋಜನೆ ಸುಧಾರಣೆಗೆ ತಜ್ಞರ ಸಲಹೆ

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯದಲ್ಲಿ ಬೆಳೆ ವಿಮೆ ಯೋಜನೆಯನ್ನು ಇನ್ನಷ್ಟು ಸುಧಾರಣೆ ಮಾಡುವ ಜತೆಗೆ ರೈತಸ್ನೇಹಿಯಾಗಿಸುವಂತೆ ತಜ್ಞರು ಸರಕಾರಕ್ಕೆ ಸಲಹೆ ನೀಡಿದ್ದಾರೆ.

ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆ ಸಂಸ್ಥೆ ಹಾಗೂ ಕೃಷಿ ಬೆಲೆ ಆಯೋಗ ಸಹಯೋಗದಲ್ಲಿ ನಡೆದ ಕಾರ್ಯಾಗಾರ ದಲ್ಲಿ ಬೆಳೆ ವಿಮೆ ಕುರಿತು ನಾನಾ ಸಲಹೆಗಳು ವ್ಯಕ್ತವಾಗಿವೆ. ಕೃಷಿಕರಿಗೆ ನಷ್ಟಆಗದಂತೆ ಹಾಲಿ ನಿಯಮಗಳಲ್ಲಿ ಕೆಲವೊಂದನ್ನು ಮಾರ್ಪಡಿಸ ಬೇಕಿದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

**ಸಾಲ ಪಡೆಯದವರಿಗೂ ಸೌಲಭ್ಯ:** ಕೃಷಿ ಬೆಲೆ ಆಯೋಗದ ಅಧ್ಯಕ್ಷ ಪ್ರಕಾಶ್ ಕಮ್ಮರಡಿ ,''ಬೆಳೆ ವಿಮೆ ಯೋಜನೆ ರೈತರಿಗೆ ವರದಾನವಾಗಿದೆ. ಇದರಲ್ಲಿ ಇನ್ನಷ್ಟು ಸುಧಾರಣೆಗೆ ಅವಕಾಶ ಗಳಿದ್ದು, ತಜ್ಞರು ಹಾಗೂ ವಿಮಾ ಸಂಸ್ಥೆಗಳ ಜತೆಗೂಡಿ ಸೂಕ್ತ ತೀರ್ಮಾನ ಕೈಗೊಳ್ಳಬೇಕು. ಸಾಲ ಪಡೆಯದ ರೈತರಿಗೂ ಬೆಳೆ ವಿಮೆ ಅನ್ವಯಿಸುವ ಅಗತ್ಯ ಇದೆ. ತಜ್ಞರ ಶಿಫಾರಸಿಗೆ ಸರಕಾರ ಆದ್ಯತೆ ನೀಡಿದರೆ ರೈತರಿಗೆ ಅನುಕೂಲ ಆಗಲಿದೆ,'' ಎಂದರು.

ಡಾ.ಎ.ರವೀಂದ್ರ, ಐಎಸ್ಇಸಿ ನಿರ್ದೇಶಕ ಪ್ರೊ. ಎಂ.ಜಿ.ಚಂದ್ರಕಾಂತ್, ಪ್ರೊ. ಎಂ.ವಿ. ನಾಡಕರ್ಣಿ, ಪ್ರೊ. ಮೀನಾಕ್ಷಿ ರಾಜೀವ್, ನಬಾರ್ಡ್, ವಿಜಯಾ, ಸಿಂಡಿಕೇಟ್, ಕೆನರಾ, ಕೃಷಿ ವಿಮಾ ಕಂಪನಿಗಳ ಪ್ರತಿನಿಧಿಗಳಿದ್ದರು.